ಮಾನಾ ಸಂಗೀತಾ
ಕನ್ನಡ ಉಪನ್ಯಾಸಕರು ಕರ್ನಾಟಕ
ಕಲಾ ವಿಜ್ಞಾನ ವಾಣಿಜ್ಯ ಕಾಲೇಜು
ಬೀದರ್

# ವಚನ ಸಾಹಿತ್ಯದಲ್ಲಿ ವ್ಯಕ್ತಿತ್ವ ವಿಕಸನದ ನೆಲೆಗಳು

ವಚನ ಸಾಹಿತ್ಯದ ಮೂಲಕ 12ನೇಶತಮಾನದ ಕನ್ನಡ ನಾಡಿನ ಇತಿಹಾಸದಲ್ಲಿ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳುಂಟಾದವು. ವಚನಸಾಹಿತ್ಯಎಂಬುದು ಒಂದು ಅಚ್ಚಗನ್ನಡ ರೂಪವಾಗಿದ್ದು, ಸಮಾಜದಲ್ಲಿ ಮನುಷ್ಯನ ಮೇಲೆ ಎಲ್ಲಾ ಮಗ್ಗಲಿನಿಂದ ಪ್ರಭಾವ ಬೀರಿದ್ದು ,ಜಾತಿ ,ವರ್ಗ ,ಲಿಂಗ ಭೇದಗಳಿಂದ ಜನರು ರೋಸಿ ಹೋಗಿದ್ದರು. ಇಂತಹ ಸಂಕ್ರಮಣಾವಸ್ಥೆಯಲ್ಲಿ ಬಂದವರೇ ಶರಣರು.

ಈ ಶರಣರು ಮನುಷ್ಯನಲ್ಲಿರುವ ಮೇಲು-ಕೀಳು ,ಉಚ್ಚ-ನೀಚ, ಬಡವ- ಶ್ರೀಮಂತ, ಹೆಣ್ಣು -ಗಂಡುಗಳ ನಡುವಿನ ಭೇದ- ಭಾವವನ್ನು ತೊಡೆದುಹಾಕಿ ಸಮಾನತೆಯ ಆಧಾರದ ಮೇಲೆ ಸಮಾಜ ಕಟ್ಟಲು ಪ್ರಯತ್ನಿಸಿದರು.

ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಲು ಹಳಗನ್ನಡ ಕಾಲದಲ್ಲಿ ಪಂಡಿತಮುಖಿಯಾದ ಸಾಹಿತ್ಯವನ್ನು ದೂರ ಮಾಡಿದರು. ಅಲ್ಲದೇ ಮನುಷ್ಯನ ಮನಸ್ಸಿನ ಮೇಲೆ ನಡೆದ ಮೂಢನಂಬಿಕೆ, ಅಂಧಶ್ರದ್ಧೆ ದೂರ ಮಾಡಿದರು.

ವಚನ ಸಾಹಿತ್ಯ ಜನಸಾಮಾನ್ಯರ ಸಾಹಿತ್ಯ, ಸಾಹಿತ್ಯವನ್ನು ರಚಿಸುವ ಉದ್ದೇಶದಿಂದ ವಚನಗಳನ್ನು ಬರೆಯಲಿಲ್ಲ, ತಮಗೆ ಕಂಡದ್ದನ್ನು ಸರಳವಾದ ಭಾಷೆಯಲ್ಲಿ ವಚನಗಳ ರೂಪದಲ್ಲಿ ವ್ಯಕ್ತಪಡಿಸಿದರು, ಅವರಲ್ಲಿ ಜೇಡರದಾಸಿಮಯ್ಯ ಆದ್ಯ ವಚನಕಾರನಾಗಿದ್ದಾನೆ, ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಅಂಬಿಗರಚೌಡಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಮಡಿವಾಳ ಮಾಚಯ್ಯ, ನುಲಿಯ ಚಂದಯ್ಯ ಮುಂತಾದ ಶರಣ-ಶರಣೆಯರು ವಚನಗಳನ್ನು ರಚಿಸಿದರು.

ಶರಣರು ವಚನಗಳ ರಚನೆಯ ಜೊತೆಗೆ ಕೊಟ್ಟ ಕೊಡುಗೆಗಳೆಂದರೆ ಕಾಯಕ ಮತ್ತು ದಾಸೋಹದ ಪರಿಕಲ್ಪನೆ. ಕೆಲಸವನ್ನು ಕಾಯಕವಾಗಿಸಿದ ಶರಣರು ಶ್ರಮ ಸಂಸ್ಕೃತಿಯನ್ನು ಜಾರಿಗೆ ತಂದರೆನ್ನಬಹುದು. ಪ್ರತಿಯೊಬ್ಬರು ಸತ್ಯ ಶುದ್ಧ ಮನಸ್ಸಿನಿಂದ ಕಾಯಕ ಮಾಡಬೇಕು ಎಂದು ಹೇಳಿ ಕಾಯಕಗಳಿಗೆ ಸಮಾನ ಸ್ಥಾನ-ಮಾನ ಕೊಟ್ಟರು. ''ಕಾಯಕವೇ ಕೈಲಾಸ'' ಎಂಬ ವಿಚಾರಧಾರೆ ಜನರ ಬದುಕಿನ ವಿಕಾಸಕ್ಕೆ ದಾರಿದೀಪವಾಯಿತು.

ಕಾಯಕದ ಇನ್ನೊಂದು ಮುಖವೇ ದಾಸೋಹ ಎನ್ನಬಹುದು. ಪ್ರತಿಯೊಬ್ಬರೂ ಕಾಯಕ ಮಾಡಿ ಗಳಿಸಿದರಲ್ಲಿ ತಮಗೆ ಅವಶ್ಯಕತೆಯಿರುವಷ್ಟು ಇಟ್ಟುಕೊಂಡು, ಉಳಿದುದನ್ನು ಅವಶ್ಯವಿರುವವರಿಗೆ ದಾಸೋಹ ಮಾಡಬೇಕು, ತಾನು ದುಡಿದುದನ್ನು ಮಾತ್ರ ದಾಸೋಹ ಮಾಡಬಹುದೇ ಹೊರತು ಬೇರೆಯವರ ಗಳಿಕೆಯನ್ನಲ್ಲ. ಆಯ್ದಕ್ಕಿಲಕ್ಕಮ್ಮನ ಗಳಿಕೆ-ಬಳಕೆ ಉಳಿಕೆಗಳ ಸದ್ವಿನಿಯೋಗವನ್ನು ಶರಣರ ಕಾಯಕ ಮತ್ತು ದಾಸೋಹಗಳಲ್ಲಿ ಕಾಣಬಹುದು.

"ಕರಿಯನಿತ್ತಡೆ ಒಲ್ಲೆ !
ಸಿರಿಯನಿತ್ತಡೆ ಒಲ್ಲೆ !
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ !
ನಿಮ್ಮ ಶರಣರ ಸೂಳ್ನುಡಿಯೊಂದರಘಳಿಗೆಯಿತ್ತಡೆ ನಿನ್ನನಿತ್ತೆ ಕಾಣಾ ರಾಮನಾಥ !"

 ISSN : 2583-2948

ಜೇಡರ ದಾಸಿಮಯ್ಯ ವಚನ ಸಾಹಿತ್ಯ ರೂಪ ಉದಯದಲ್ಲಿ ವಾಗ್ಮಯದ ಉದಯ ಧರ್ಮ ಜೀವನದ ಮೂಲವಾದಲ್ಲಿ ತಾವು ಬೋಧಿಸುವುದು ಸಾಮಾನ್ಯ ಜನರಿಗೂ ತಲುಪಬೇಕು ಎಂಬ ಆಶಯ ಹೊಂದಿದ್ದರು. ವೀರಶೈವ ಶರಣರು ಜನಸಾಮಾನ್ಯರ ಭಾಷೆಯಲ್ಲಿ ತಮ್ಮ ಭಾವನೆಗಳನ್ನು, ತತ್ವಗಳನ್ನು ನಿರೂಪಿಸಿದರು. ಅವರ ಆತ್ಮ ನಿರೀಕ್ಷಣೆ ಆತ್ಮಾನುಭಾವಗಳು ವಚನ ರೂಪದಲ್ಲಿ ಅಭಿವ್ಯಕ್ತಿ ಪಡೆದಿದವೆ. ವಚನ ಸಾಹಿತ್ಯ ವಿಶ್ವ ಸಾಹಿತ್ಯಕ್ಕೆ ಕನ್ನಡದ ವಿಶಿಷ್ಟ ಕೊಡುಗೆ ಎನಿಸಿದೆ.

ಶರಣರು ತಮ್ಮ ಪರಿಸರದೊಂದಿಗೆ ಸ್ಪಂದಿಸಿದ ವ್ಯಕ್ತಿತ್ವ ವಿಕಸನದ ಫಲವೇ ವಚನಗಳು. ಅವು ಮೂಲತ ಪ್ರತಿಭಟನಾತ್ಮಕವಾಗಿವೆ ಅವುಗಳ ಒಟ್ಟು ಉದ್ದೇಶ ಸ್ವಸ್ಥ ಸಮಾಜ ನಿರ್ಮಾಣ ಮಾಡುವುದಾಗಿದೆ ವಚನಗಳ ಮೂಲಕ ಇವರು ಆ ಕಾಲದ ಇಡೀ ಜೀವನವನ್ನೇ ಕಲಕಿದರು. ಅವರಿಗೆ ಆಂದೋಲನವೆಂದರೆ ಹೊಸ ಜೀವನ, ಹೊಸ ಜೀವನವೆಂದರೆ ಜನ ಆರಾಧಿಸುವಂತೆ ಮಾಡುವುದು ಇದರಿಂದ ಜನರಲ್ಲಿ ಆತ್ಮವಿಶ್ವಾಸ ಮೂಡಿಸಬೇಕು ಎಂಬ ವಿಚಾರ ಶರಣರದ್ದಾಗಿತ್ತು. ದೇವಸ್ಥಾನಗಳ ನಿರಾಕರಣೆ ಎಲ್ಲಾ ಜಾತಿ ಒಂದೇ ಎಂಬ ಅರಿವು ಸಮಯ ಬಂದರೆ ಪ್ರಭುತ್ವವನ್ನು ಧಿಕ್ಕರಿಸುವುದು ಇಂಥ ವಿಚಾರಗಳು ಹಳೆಯ ಪರಂಪರೆಗಳಿಗೆ ಸಿಡಿಮದ್ದಾಗಿ ಪರಿಣಮಿಸಿ ಇಡೀ ವ್ಯವಸ್ಥೆಯೇ ಬೇರು ಸಹಿತ ಅಲುಗಾಡುವಂತಾಯಿತು. ಹೀಗಾಗಿ ಜನರಲ್ಲಿ ತಮ್ಮ ಬದುಕನ್ನು ಹೊಸ ಚೈತನ್ಯ ಮೂಡುವಂತೆ ಮಾಡಿತು.

ಈ ವಚನ ಸಾಹಿತ್ಯವು ಬಹಳಷ್ಟು ಜನರಲ್ಲಿ ಹೊಸ ರೂಪವನ್ನು ತಳೆಯುವಂತೆ ಮಾಡಿತು. ಹಾಗಾಗಿ ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯದ ಮೇಲುಗೈ ಆಗಿದೆ. ವಚನಕಾರರು ಒಂದು ಕಡೆ ಸಕಲ ಜೀವಾತ್ಮರುಗಳಿಗೆ ಲೇಸನೆ ಬಯಸುವ ಈ ಮಹತ್ಕಾರ್ಯಕ್ಕೆ ಮುಂದಾಗಿದ್ದರಲ್ಲದೆ, ಜನರ ಹೆಗಲಿಗೆ ಹೆಗಲಾಗಿ ಅವರ ಕಷ್ಟ ಕಾರ್ಪಣ್ಯಗಳಿಗೆ ಬೆಳಕಾಗಿ ಅವರ ಬದುಕನ್ನು ಸುಂದರ ರೂಪವಾಗಿ ಕಟ್ಟಿದರು.

ಶರಣರ ನಡೆ ನುಡಿಗಳೆಲ್ಲ ಕನ್ನಡ ಧರ್ಮ ದೈವ ಆಚಾರ-ವಿಚಾರ ಚಿಂತನ-ಮಂಥನ ಎಲ್ಲವೂ ಕನ್ನಡವೇ ದೇವ ಭಾಷೆಯನ್ನಾಗಿಸಿಕೊಂಡು ಸಂಸ್ಕೃತ ಅಭಿಭಾಷೆಗಳನ್ನು ಮೆಟ್ಟಿನಿಂತು ಕನ್ನಡ ಕಟ್ಟಬೇಕೆಂಬ ಕಲ್ಯಾಣದ ಕನಸಿಗೆ ತಮ್ಮ ಅಂತರಂಗದ ಅನುಭವ ಅಭಿವ್ಯಕ್ತಿಗೆ ಗಟ್ಟಿ ಭಾರವಾಗಿ ನಿಂತಬದುಕು, ಬದುಕು ಬ್ರಹ್ಮನಿರಸವಾಗದೆ ಸಂಭ್ರಮ ಯುತವಾಗಿ ಮಾಡಿದರು

ಜನರಲ್ಲಿ ಶಿವ ಪೂಜೆಯನ್ನು ಕಡೆಗಣಿಸಿ ವಿಷಯವಾಸನೆಗಳಿಗೆ ಒಳಗಾಗಿ ಬದುಕುವುದು ಸರಿಯಲ್ಲ ಎಂದು ಇದು ವಿಷಯ ಎಂಜಲು ತಿಂದಂತಾಗುತ್ತದೆ. ಆದುದರಿಂದ ಆ ಪರಶಿವನನ್ನು ಪಡೆದುಕೊಳ್ಳಲು ಇಚ್ಛಿಸುವುದೇ ನಿಜವಾದ ಮಾನವ ಧರ್ಮ ಎಂದು ಸಾರಿ ಸಾರಿ ಹೇಳಿ ಜನರ ಬದುಕುಗೆ ಏಳಿಗೆಯನ್ನು ತಂದರು.

ಶಿವಶರಣರ ಬದುಕು "ಗಾಳಿ ಸುಂಕದ ದೊಂಬಿ", ಮುಟ್ಟದ ಅರುಣಕೆಣುಕದ ಪರಿಮಳ ತುಂಬಿದ ವೈವಿಧ್ಯದ ಪುಷ್ಪಕಳಿದಂತೆ. ಒಂದೊಂದರಲ್ಲಿಯೂ ಒಂದೊಂದು, ಹೊರ ಸೂಸುವಂತೆ ಪ್ರತಿಯೊಬ್ಬ ವ್ಯಕ್ತಿಯಲ್ಲಿ ತನ್ನದೇ ಆದ ಆತ್ಮವಿಶ್ವಾಸವನ್ನು ತುಂಬಿ ಜನರ ಜೀವನಕ್ಕೆ ಬೆಳಕಾಗಿದ್ದಾರೆ.

"ಕೃಷಿಯ ಮಾಡಿ ಉಣ್ಣದೆ, ಹಸಿವು ಹರಿವ ಪರಿ ಇನ್ನೆಂತೋ ?
ಕರ್ಮಯೋಗವ ಮಾಡದೆ ನಿರ್ಮಲ ಸುಚಿತ್ತವನರಿವ ಪರಿ ಇನ್ನೆಂತೋ ?
ಬೇಯದೆ ಅಶನನುಂಬ ಠಾವಾವುದು ಕಪಿಲಸಿದ್ಧ ಮಲ್ಲಿಕಾರ್ಜುನ ಲಿಂಗಕ್ಕೆ" ?

ಹೀಗೆ ವಚನಕಾರರು ತಮ್ಮ ಮಾತಿನ ಮುಖಾಂತರ ಜನರ ಬದುಕಿಗೆ ದಾರಿದೀಪವಾಗಿದ್ದರು.
ಶರಣರು ತ್ರಿವಿಧ, ಮಂತ್ರಗೋಪ್ಯ, ಕರಣಹಸಿಗೆ, ಇತ್ಯಾದಿ ಪ್ರಕಾರಗಳನ್ನು ನಿರ್ಮಿಸಿದ್ದರೂ ವಚನ ಪ್ರಕಾರ ಅವರ ವ್ಯಕ್ತಿಸಿದ್ಧಿಯ ಪತಾಕೆ, ಇದರಲ್ಲಿ ವಚನ, ಸ್ವರವಚನವೆಂದು ಎರಡು ವಿಧಗಳುಂಟು. ಒಂದು ಅನುಭಾವದ ಗದ್ಯ

ಪ್ರಕಾರ, ಇನ್ನೊಂದು ಅನುಭಾವದ ಗೀತಪ್ರಕಾರ. ವಚನಗಳು ತಮ್ಮ ಉಜ್ವಲ ಸಾಹಿತ್ಯದಿಂದ, ಸ್ವರವಚನಗಳು ತಮ್ಮ ಗೇಯ ಗುಣದಿಂದ ಸಮಸ್ತ ಸಹೃದಯರನ್ನೂ ಆಕರ್ಷಿಸಿವೆ.

**ಪರಾಮರ್ಶನ ಗ್ರಂಥಗಳು**:


೧. ಶಿವಶರಣ ಚರಿತೆ ಭಾಗ - ೧, ೨, ೩, --- ಡಾ. ಫ.ಗು. ಹಳಕಟ್ಟಿ

೨. ವಚನ ಸಾಹಿತ್ಯ (ಸಾ.ಸಾ. ಚರಿತ್ರೆ-ಸಂ.೫) --- ಡಾ. ಎಂ. ಚಿದಾನಂದಮೂರ್ತಿ

೩. ಬಸವಯುಗದ ವಚನ ಮಹಾಸಂಪುಟ --- ಡಾ. ಎಂ.ಎಂ. ಕಲಬುರ್ಗಿ

೪. ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳು --- ಕನ್ನಡ ಅಧ್ಯಯನ ಸಂಸ್ಥೆ, ಗು.ವಿ.ಕ